ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

**ಸಿ.ಸಿ. ನಂ.2/2015**

| | |
|---|---|
| ಸಾಕ್ಷಿಯ ಹೆಸರು | ಗೀತಾ |
| ತಂದೆ / ಗಂಡ ಹೆಸರು | ಶಿವ |
| ವಯಸ್ಸು | 35 |
| ಉದ್ಯೋಗ | ಕೂಲಿ |
| ವಾಸ ಸ್ಥಳ | ಅಂಕನಹಳ್ಳಿ |

ಪ್ರಾಸಾ 2
ಚಾಸಾ 2

ಸಾಕ್ಷಿಗ ಪ್ರಮಾಣ ವಚನ ಬೋಧಿಸಲಾಯಿತು.
ದಿನಾಂಕ ಃ 27-03-2018.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ-

ಚಾಸಾ-1 ನನ್ನ ಗಂಡ, ಚಾಸಾ-3 ನನ್ನ ವಾರಗಿತ್ತಿ, ಚಾಸಾ-4 ನನ್ನ ನಾದಿನಿ. ಆರೋಪಿತರು ನಮ್ಮ ಗ್ರಾಮದವರು, ಪರಿಚಯ ಇದೆ. ದಿನಾಂಕ 20-10-2014 ರಂದು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಮ್ಮ ಮನೆಯಲ್ಲಿರುವಾಗ ನಾನು ಅಡುಗೆ ಮನೆಯಲ್ಲಿದ್ದೆ, ನಮ್ಮ ಮನೆಯ ಕುಂಬಳಕಾಯಿ ಗಿಡದಿಂದ ಕುಂಬಳಕಾಯಿಯನ್ನು ಯಾರೋ ಕಿತ್ತುಕೊಂಡು ಹೋಗಿರುತ್ತಾರೆ ಎಂದು ನನ್ನ ಗಂಡ ಕೇಳಿರುತ್ತಾರೆ. ಸ್ವಲ್ಪ ದೂರದಲ್ಲಿ ಆರೋಪಿತರೆಲ್ಲರೂ ಧರ್ಮಸ್ಥಳ ಸಂಘದಿಂದ ಮೀಟಿಂಗ್ ಮಾಡುತ್ತಿದ್ದರು. ಆರೋಪಿತರೆಲ್ಲರೂ ಬಂದು ನಮ್ಮನ್ನೇ ಬೈಯ್ಯುತ್ತಿದ್ದಾರೆ ಎಂದು ನನ್ನ ಗಂಡನ ಮೇಲೆ ಜಗಳ ಮಾಡಲು ಬಂದಿರುತ್ತಾರೆ. ಶಾಂತ, ಸತ್ಯ, ಪುನೀತ್, ರಂಗಸ್ವಾಮಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ಜಗಳ ಬಿಡಿಸಲು ಬಂದ ಚಾಸಾ-3 ರವರಿಗೆ ಪಲ್ಲವಿ, ಆಶಾ ಎಳೆದುಕೊಂಡು ಕೈಗಳಿಂದ ಎದೆಗೆ ಹೊಡೆದಿರುತ್ತಾರೆ. ಆಗ ನಾನು ಮತ್ತು ಚಾಸಾ-4 ಹೋಗಿ ಜಗಳ ಬಿಡಿಸಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದಃ-

ಆರೋಪಿ ಜಾನಕಿ, ಸಣ್ಣಯ್ಯ, ಜಯಮ್ಮ, ಮಣಿರವರು ನಮ್ಮ ಮನೆಗೆ ನುಗ್ಗಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ನಿಜ.

ಆರೋಪಿ ಪರ ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ-ಇಲ್ಲಾ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

(ಶ್ರೀನಾಥ್.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.